(ಒ) ಬೀಡಿ ಕಾರ್ಮಿಕರ ಬಗ್ಗೆ

ಇದಕ್ಕೆ ಸರ್ಕಾರ ಸ್ಪಷ್ಟೀಕರಣವನ್ನು ಕೊಡಬೇಕೆಂದು ಕೇಳುತ್ತಿದ್ದೇನೆ. ಎರಡನೆಯದಾಗಿ ಸನ್ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ಟೆಂಪೋ ಅಪಘಾತ ರಿಕ್ಷಾ ಅಪಘಾತಗಳಲ್ಲಿ ಚಾಲಕರ ಕುಟುಂಬದವರಿಗೆ ಐವತ್ತು ಸಾವಿರ ರೂಪಾಯಿ ಕೊಡಬೇಕೆಂದು ಆದೇಶ ಹೊರಟು ಸುಮಾರು ಒಂದು ವರ್ಷವಾದರೂ ಕೂಡ ಪರಿಹಾರ ಸಿಗುತ್ತಾ ಇಲ್ಲ, ಇದಕ್ಕೆ ಇಲಾಖಾ ವತಿಯಿಂದ ಸ್ಪಷ್ಟ ನಿರ್ದೇಶನದ ಕೊರತೆಯೊಂದು ನನ್ನ ಗಮನಕ್ಕೆ ಬಂದಿದೆ ಇದರ ಬಗ್ಗೆಯೂ ಕೂಡ ಗಮನಹರಿಸಿ ತಕ್ಷಣ ಪರಿಹಾರವನ್ನು ನೀಡುವ ನಿಟ್ಟಿನಲ್ಲಿ ಕೂಡ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:- ಸಿಗರೇಟ್ ತಯಾರಿಕೆಯಲ್ಲಿ ಈ ಪ್ರಶ್ನೆ ಬರುತ್ತಾ ಇರತಕ್ಕಂಥದ್ದು ಮಾನ್ಯ ಅಧ್ಯಕ್ಷರೆ, ಮಿನಿ ಸಿಗರೇಟ್‌ಗೆ ಪರ್ಮಿಷನ್ ಕೊಟ್ಟರೆ ಹತ್ತು ಲಕ್ಷ ಕಾರ್ಮಿಕರ ಜೀವನಕ್ಕೆ ತೊಂದರೆಯಾಗುತ್ತದೆ, 375 ರೂಟ್ಯಾಕ್ಸ್ ಇದುದ್ದನ್ನು ಕೇಂದ್ರ ಸರ್ಕಾರದವರು 75 ರೂಪಾಯಿಗೆ ಇಳಿಸಿದ್ದಾರೆ, ಕರ್ನಾಟಕ ರಾಜ್ಯದಲ್ಲಾದರೂ ನೀವು ಮನಸ್ಸು ಮಾಡಿ ಅದನ್ನು ತಡೆಹಿಡಿಯಿರಿ, ಇಲ್ಲಿ ಹತ್ತು ಲಕ್ಷ ಜನ ಬೀಡಿ ಕಾರ್ಮಿಕರು ಇದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿರುವಂತದ್ದು.

ಶ್ರೀ ಎನ್. ಯೋಗೀಶ್ ಭಟ್:- ಮಾನ್ಯ ಅಧ್ಯಕ್ಷರೆ, ಇಷ್ಟು ಗಂಭೀರವಾದ ಸಮಸ್ಯೆಯನ್ನು ಸರ್ಕಾರದ ಸಚಿವರು ಕೇಳಲಿಕ್ಕೆ ಯೋಗ್ಯತೆ ಇಲ್ಲ ಎಂದರೆ ಏನು ಇದರ ಅರ್ಥ? ಇಲ್ಲಿ ಯಾರೂ ಒಂದು ಉತ್ತರವನ್ನು ಕೊಡುವಂಥ ಯೋಗ್ಯತೆ ಇಲ್ಲವೇ?

ಶ್ರೀ ಬಿ. ಸತ್ಯನಾರಾಯಣ:- ಮಾನ್ಯ ಅಧ್ಯಕ್ಷರೆ ನನಗೆ ವಿಷಯ ಅರ್ಥವಾಗಿದೆ. 60 ಎಂಎಂ ಸಿಗರೇಟು ತಯಾರಿಕೆ ಮಾಡುವುದರಿಂದ, ಕಾರ್ಮಿಕರಿಗೆ, ಬೀಡಿ ಉದ್ಯಮಕ್ಕೆ ಹೊಡೆತ ಬೀಳುತ್ತದೆ ಎಂಬುದು. ಸಿಗರೇಟನ್ನು ತಯಾರಿಕೆ ಮಾಡುವ ಪರವಾನಿಗೆಯನ್ನು ಕೊಡುವುದು ನಮ್ಮ ಇಲಾಖೆಗೆ ಬರುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ.

ಅಧ್ಯಕ್ಷರು:- ಅವರು ನಿಮ್ಮನ್ನು ಕೇಳಲಿಲ್ಲ, ಸರ್ಕಾರದ ಪರವಾಗಿ ಯಾರಾದರು ಉತ್ತರ ಕೊಡಲಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:- ಪ್ರಶ್ನೆ ಏನೆಂದು ಹೇಳಿದರೆ, ಮಿನಿ ಸಿಗರೇಟಿಗೆ ಅನುಮತಿ ಕೊಡುವುದರಿಂದ ಲಕ್ಷಾಂತರ ಜನ ಬೀಡಿ ಕಾರ್ಮಿಕರಿಗೆ ಹೊಡೆತ ಬೀಳುತ್ತದೆ ಅದಕ್ಕೆ ರಾಜ್ಯಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸುತ್ತಿದ್ದಾರೆ...

ಶ್ರೀ ಬಿ. ಎ. ಮೊಯ್ದೀನ್:- ಇದು ಗಂಭೀರವಾದಂಥ ಸಮಸ್ಯೆ, ಅವರು ತ್ವರಿತವಾಗಿ ಇದರ ಬಗ್ಗೆ ಸರ್ಕಾರ ಕ್ರಮವನ್ನು ಜರುಗಿಸಬೇಕೆಂದು ಎಚ್ಚರಿಸಿದ್ದಾರೆ. ಇದರ ಬಗ್ಗೆ ಸರ್ಕಾರ ಚರ್ಚೆ ಮಾಡುತ್ತದೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ):- ಸನ್ಮಾನ್ಯ ಅಧ್ಯಕ್ಷರೆ, ಈಗ ದರಖಾಸ್ತು ಕಮಿಟಿ ವಿಷಯದಲ್ಲಿ ಎಲ್ಲಾ ಶಾಸಕರನ್ನು ತಾವು ಅಧ್ಯಕ್ಷರನ್ನಾಗಿ ಮಾಡಿದ್ದೀರಿ ಇಲ್ಲಿ ಸಮಸ್ಯೆ

ಇರುವುದು ಏನೆಂದರೆ 19ನೇ ಇಸವಿ ಸುಮಾರು ನವೆಂಬರ್ ಅಥವಾ ಅಕ್ಟೋಬರ್‌ನಲ್ಲಿ ಒಂದು ಕಟಾಫ್ ಡೇಟ್ ಮಾಡಿದಿರಿ; ಅಷ್ಟನೇ ಇಸವಿಯೊಳಗೆ ಯಾರ್ಯಾರು ಭೂಮಿಯನ್ನು ಊಳುತ್ತಿದ್ದರು ಅದರ ಬಗ್ಗೆ ಒಂದು ಅರ್ಜಿ ಕೊಡಿ, (ಅರ್ಜಿ ನಂ. 50) ಅರ್ಜಿ 1991ನೇ ಇಸವಿಯೊಳಗೆ ಗೊತ್ತಿರತಕ್ಕಂಥಹವರು ಕಂದಾಯ ಇಲಾಖೆಯವರದು ವಿಷಯ ತಿಳುವಳಿಕೆ ಇರತಕ್ಕವರು, ತಿಳುವಳಿಕೆ ಕೊಡುವುದರ ಮೂಲಕ ಕೊಟ್ಟರು. ಆದರೆ ಇನ್ನೂ 15 ರಿಂದ 20 ಪರ್ಸೆಂಟ್ ಜನ ಅವಿದ್ಯಾವಂತರು, ವಿಷಯವೇ ಗೊತ್ತಿಲ್ಲದೇ ಇರತಕ್ಕವರು ಫಾರಂ ನಂ. 50 ಬಗ್ಗೆ ಬಂದು ನಮಗೆ ಅರ್ಜಿ ಕೊಡುತ್ತಾರೆ. ಇದರ ಬಗ್ಗೆ ಸರ್ಕಾರದ ನಿಲುವನ್ನು ತಾವು ದಯವಿಟ್ಟು ಹೇಳಬೇಕು. ಏಕೆಂದು ಹೇಳಿದರೆ ನಿಜವಾಗಿಯೂ ಭೂಮಿ ಉಳುತ್ತಿದ್ದು ಅವರಿಗೆ ಸಿಕ್ಕದೇ ಇದ್ದರೆ ಅದರಲ್ಲೂ ಅರ್ಧ ಎಕರೆ, ಮುಕ್ಕಾಲು ಎಕರೆ ಇರತಕ್ಕಂಥ ಬಹಳ ಬಡತನದ ರೇಖೆಯಲ್ಲಿರತಕ್ಕಂಥ ರೈತರಬಗ್ಗೆ, ಅವರಿಗೆ ಸಿಗತಕ್ಕಂಥ ವ್ಯವಸ್ಥೆಯ ಬಗ್ಗೆ, ಸರ್ಕಾರ ಅತ್ಯಂತ ಗಂಭೀರವಾಗಿ ಯೋಚನೆ ಮಾಡಿ, ಫಾರಂ ನಂ. 50ರ ಬಗ್ಗೆ ಪುನರ್ ಪರಿಶೀಲನೆ ಮಾಡಿ ಒಂದು ಕಾಲ ನಿಗಧಿ ಮಾಡುವುದರ ಬಗ್ಗೆ ತಾವೇನಾದರು ಆಲೋಚನೆ ಮಾಡಿದ್ದೀರಾ ಎಂಬುವುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ಇದರ ಬಗ್ಗೆ ನಾವು ಬಹಳ ಸಲ ಚರ್ಚೆ ಮಾಡಿದ್ದೇವೆ. ಕಾನೂನು ಇಲಾಖೆಯೊಂದಿಗೆ ಚರ್ಚೆ ಮಾಡಿದ್ದೇವೆ, ಕಂದಾಯ ಮಂತ್ರಿಗಳೊಂದಿಗೂ ಚರ್ಚೆ ಮಾಡಿದ್ದೇವೆ, ಸಭಾಧ್ಯಕ್ಷರ ಕೊಠಡಿಯಲ್ಲಿ ಒಂದು ಸಭೆಯನ್ನು ನಾವು ಕರೆದಿದ್ದೆವು. ಸುಮಾರು ಆರು ತಿಂಗಳ ಹಿಂದೆ ಸಭಾಧ್ಯಕ್ಷರು ಕೂಡ ಇದರ ಬಗ್ಗೆ ಏನಾದರೂ ಕ್ರಮವನ್ನು ಕೈಗೊಳ್ಳಬೇಕು ಎಂದು ಹೇಳುತ್ತಾ ಇರತಕ್ಕಂಥ ನಿಟ್ಟಿನಲ್ಲಿಯೂ ಕೂಡ ಅವರು ವಿಚಾರ ಮಾಡಿದ್ದಾರೆ. ಈಗ ಏನಾಗಿದೆ ಆ 94ಎ ಅದರ ಅಡಿಯಲ್ಲಿ ಆಫಾರಂ ನಂ.50ರಲ್ಲಿ ನಾವು ಕೊಡಲಿಕ್ಕೆ ಇರತಕ್ಕಂಥ ಸಮಯ ಮುಗಿದುಹೋಗಿದೆ. ಅದು ಮುಗಿದು ಸುಮಾರು ಮೂರು ವರ್ಷ ಆಯಿತು. ಆ ಒಂದು ಪರಿಸ್ಥಿತಿಯಲ್ಲಿ ನಾವು ಈಗ 94ಕ್ಕೆ ಒಂದು ತಿದ್ದುಪಡಿಯನ್ನು ತರುವುದರ ಮುಖಾಂತರ ಪುನ: ಸಮಯವನ್ನು ನಾವು ಎಲ್ಲಾದರು ಮುಂದುವರೆಸಿದರೆ ಬಹುಶ: ವ್ಯಾಪಕವಾಗಿ ಬೇರೆ ಬೇಕಾದಷ್ಟು ಅರ್ಜಿಗಳು ಬರುತ್ತದೆ ಎಂದು ಹೇಳುತ್ತಾ ಇರತಕ್ಕಂಥ ಸಂದರ್ಭದಲ್ಲಿ we are opening the flood gates ಎಂದು ಹೇಳುತ್ತಾ ಇರತಕ್ಕಂಥದ್ದು ಆಯಿತು. ಇದಕ್ಕೆ ಸೀಮಿತವಾಗಿ ಯಾರು ಬಡವರು ನಿಜವಾಗಿ ಜಮೀನಿನಲ್ಲಿ ಉಳುಮೆ ಮಾಡಿಕೊಂಡು. ಇದ್ದಂತಹವರೂ. ಈ ಫಾರಂ ನಂ. 50 ಅನ್ನು ಹಲವಾರು ಕಾರಣಗಳಿಂದ ಅವರು ಸಲ್ಲಿಸಲಿಕ್ಕೆ ಆಗಲಿಲ್ಲ, ಕೆಲವು ಸಂದರ್ಭಗಳಲ್ಲಿ ಅವರಿಗೆ ಗೊತ್ತಿರಲಿಕ್ಕಿಲ್ಲ, ಗ್ರಾಮಾಂತರ ಪ್ರದೇಶದ ಜನರಿಗೆ ಇಂತಹ ಸಂದರ್ಭದಲ್ಲಿ ಸಲ್ಲಿಸಬೇಕು ಎಂದು ಹೇಳುತ್ತಾಇರತಕ್ಕಂಥ ಅಲ್ಲಿನ ಬಡಜನತೆಗೆ ಈ ಸಮಯ ಮತ್ತು ಈ ಕಾನೂನಿನ ಪರಿಮಿತಿ ಗೊತ್ತಿಲ್ಲದೆ ಇರತಕ್ಕಂಥ ಪರಿಸ್ಥಿತಿ ಇದೆ ಎಂದು ಹೇಳುತ್ತಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ಈಗಾಗಲೇ ಇದನ್ನು ಕಂದಾಯ ಸಚಿವರ ಜೊತೆಯಲ್ಲಿ ಚರ್ಚೆ ಮಾಡುತ್ತಿದ್ದೇವೆ, ಯಾವುದೋ ಒಂದು ಭಾಗದಲ್ಲಿ ಈ ಜನರು ಯಾರು ಫಾರಂ ನಂ. 50ನ್ನು ಕೊಡಲಿಕ್ಕಾಗದೆ ಹಲವಾರು ವರ್ಷಗಳಿಂದ ಜಮೀನನ್ನು ಉಳುಮೆ ಮಾಡಿಕೊಂಡು ಇರತಕ್ಕವರಿಗೆ ಹೇಗಾದರೂ ಮಾಡಿ ಅವರಿಗೆ ಜಮೀನನ್ನು ಕೊಡುವಂಥದ್ದಕ್ಕೆ ನಾವು ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ.

ಅಧ್ಯಕ್ಷರು:- ತಾವು ಇಷ್ಟು ಮಾಡಿ, ಎಲ್ಲಿ ಬಡವರ್ಗದ ಜನ ಸರ್ಕಾರಿ ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದಾರೆ, ಅವರು ಅರ್ಜಿ ಸಲ್ಲಿಸಿಲ್ಲ, ಆ ದರಖಾಸ್ತು ಸಮಿತಿಯವರು ಹೋಗಿ ಸ್ಥಳದ ತನಿಖೆ ನಡೆಸಿ ಅವರು ನಿಜವಾಗಲೂ ಆ ಜಮೀನಿನಲ್ಲಿದ್ದು ಆ ಜಮೀನನ್ನು ಪಡೆದುಕೊಳ್ಳುವುದಕ್ಕೆ ಅವರು ಅರ್ಹರಾಗಿದ್ದರೆ ಅಂತಹ ಕೇಸಸ್‌ನಲ್ಲಾದರೂ ಅವರಿಂದ ಹೊಸದಾಗಿ ಫಾರಂಗಳನ್ನು ಪಡೆದುಕೊಳ್ಳುವುದಕ್ಕಾದರು ನೀವು ಒಂದು ವ್ಯವಸ್ಥೆ ಮಾಡಿ. ಈಗ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ನಾವು ಮಾಡಿದಾಗ ಅನೇಕ ಹಂತಗಳಲ್ಲಿ ಫಾರಂ 7 ನನ್ನೂ ಫೈಲ್ ಮಾಡುವುದಕ್ಕೆ ನಾವು ಟೈಮನ್ನೂ ಎಕ್ಸ್‌ಟೆಂಡ್ ಮಾಡುತ್ತಾ ಹೋದೆವು. ಏಕೆಂದರೆ, they are ignorant people ನಿಮ್ಮ ಸಮಸ್ಯೆ ನನಗೆ ಅರ್ಥವಾಯಿತು. ಜನರಲ್ ಆಗಿ ಎಲ್ಲರಿಗೂ ಎಕ್ಸ್‌ಟೆಂಡ್ ಮಾಡಿಬಿಟ್ಟರೆ, we will be creating new applicants, ಫ್ಲಡ್ ಗೇಟ್ ಓಪನ್ ಮಾಡಿದಂತೆ ಆಗುತ್ತದೆ. ಮತ್ತೆ political considerations. ಇವೆಲ್ಲಿ ಬರುತ್ತದೆ. all that I agree. ಆದರೆ ನಾನು ಹೇಳಿದಂಥ ಒಂದು ಷರತ್ತನ್ನು ತಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗುತ್ತದೆ.

SRI M.C NANAIAH:- I am thinking of a proviso to sec. 94 of the Act. we are at it now. we will find out a method by which poor people should get their lands

ಶ್ರೀ ಎಂ. ಶ್ರೀನಿವಾಸ್ (ಉತ್ತರಹಳ್ಳಿ):- ಈಗ ತಾವು ಫಾರಂ ನಂ 50ರಲ್ಲಿ ಈ ಲ್ಯಾಂಡ್ ಗ್ರಾಂಟ್‌ಗೆ ಸಂಬಂಧಪಟ್ಟ ಹಾಗೆ ಮಾಡಿದ್ದೀರಿ ಒಂದು ಏನು ಮಾಡಿದ್ದಾರೆ, ಸರ್ಕಾರದವರು ಹಿಂದೆಯೇ ಒಂದು ಆರ್ಡರ್ ಮಾಡಿದ್ದಾರೆ ಏನು ಕಾರ್ಪೊರೇಷನ್ ಟೋಲ್‌ಗೇಟ್ ಇದೆಯಲ್ಲಾ ಆದರಿಂದ 18 ಕಿಲೋಮೀಟರ್ ಇರುವವರಿಗೆ ನೀವು ಮಾಡಿ ಎಂದು ಹೇಳಿದ್ದೀರಿ ಕಾರ್ಪೊರೇಷನ್ ಟೋಲ್‌ಗೇಟ್ ಮೊದಲು ಎಲ್ಲಿತ್ತು? 1969ರಲ್ಲಿ ಇರತಕ್ಕಂಥದ್ದು 6 ಕಿಲೋಮೀಟರ್ ಈ ಕಡೆ ಇದೆ, ಈಗ 6 ಕಿಲೋಮೀಟರ್ ಟೋಲ್‌ಗೇಟನ್ನು ಮುಂದಕ್ಕೆ ಹಾಕಿದ್ದಾರೆ. ಆದರೆ ಅವರಿಗೆ ಮಾಡುವುದಕ್ಕೆ ಬರುವುದಿಲ್ಲ ಎಂದು ಕಾನೂನಿನಲ್ಲಿ ಒಂದು ಆರ್ಡರನ್ನು ಮಾಡಿದ್ದೀರಿ. ಆದರೆ ಅವರು 30 ವರ್ಷದಿಂದ ಆ ಜಮೀನನ್ನು ಉಳುಮೆ ಮಾಡುತ್ತಿದ್ದಾರೆ. ಆದರೆ ನೀವು ಕಿಲೋಮೀಟರನ್ನು ಲೆಕ್ಕ ಹಾಕತಕ್ಕಂಥದ್ದು ವಿಧಾನಸೌಧ ಮೊದಲು ಅಶೋಕ ಕಛೇರಿ ಎಂದು ಲೆಕ್ಕ ಬರುತ್ತದೆ. ಅದನ್ನು ತಾವು ದಯವಿಟ್ಟು, ಈಗ ಅವರನ್ನು ನೀವು ಬಿಡಿಸುವುದಕ್ಕೆ ಆಗುವುದಿಲ್ಲ. 18 ಕಿಲೋಮೀಟರ್ ಎಲ್ಲಿ, 12 ಕಿಲೋಮೀಟರ್ ಎಲ್ಲಿ; ಅವರು ಫಾರಂ ನಂ. 50 ಹಾಕಿ ಜಮೀನನ್ನು ಉಳುಮೆ ಮಾಡುತ್ತಿದ್ದಾರೆ. ಅವರಿಗೆ ತಾವು 18 ಕಿಲೋಮೀಟರ್ ಒಳಗಡೆ ಇದ್ದರೂ ಮಾಡಬಹುದು ಎಂಬ ಕಾನೂನನ್ನು ಸರ್ಕಾರದವರು ಮಾಡಬೇಕು.

ಶ್ರೀ ಎಂ.ಸಿ. ನಾಣಯ್ಯ:- ಇದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಅಧ್ಯಕ್ಷರೇ ಕಳೆದ ಅಧಿವೇಶನದಲ್ಲಿ ತಾವೇ ರೆವಿನ್ಯೂ ಮಂತ್ರಿಗಳೊಂದಿಗೆ ಚರ್ಚೆ ಮಾಡಿ ಒಂದು ಸೂಚನೆಯನ್ನು ಕೊಟ್ಟಿದ್ದೀರಿ.

ಮಾನ್ಯ ನಾಣಯ್ಯನವರು ಅವ್ಹೊತ್ತು ಈ ವಿಷಯವಾಗಿ ಒಂದು ಸುತ್ತೋಲೆಯನ್ನು ವ್ಯವಸ್ಥೆ ಮಾಡುತ್ತೇನೆ ಎಂದು ಹೇಳಿದರು. ಆದರೆ, ಮೊದಲು ಅರ್ಜಿ ಹಾಕಿರುವುದೂ ಕೂಡ ಡೆಪ್ಯೂಟಿ ಕಮಿಷನರ್ ರಿಜಿಸ್ಟರ್‌ನಲ್ಲಿ ಎಂಟ್ರಿ ಮಾಡಿಕೊಂಡು ಅದರಲ್ಲಿ ಸಹಿ ಮಾಡಿಬಿಟ್ಟಿದ್ದಾರೆ. ಆದರಿಂದ ಸಮಸ್ಯೆ ಏನಾಗಿದೆಯೆಂದರೆ ಅರ್ಜಿ ಹಾಕಿರುವವರ ಹತ್ತಿರ ಎಂಡಾರ್ಸ್‌ಮೆಂಟ್ ಇದೆ, ಆದರೆ ರಿಜಿಸ್ಟರ್‌ನಲ್ಲಿ ಎಂಟ್ರಿ ಇಲ್ಲ. ಈಗ ಅವರು ಏನು ಹೇಳುತ್ತಾರೆ. ಡಿ.ಸಿ. ಒಂದು ಸಲ ಸಹಿ ಮಾಡಿದಮೇಲೆ ಅವರ ಹತ್ತಿರ ಎಂಡಾರ್ಸ್‌ಮೆಂಟ್ ಇದ್ದರೂ ಕೂಡ ನಾವು ಅದನ್ನು ಅರ್ಜಿ ಎಂದು ಪರಿಗಣಿಸುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಇದು ನಾನು ಆ ಸಮಿತಿಯ ಅಧ್ಯಕ್ಷನಾಗಿ ನನ್ನ ಅನುಭವದಲ್ಲಿ ಹೇಳುತ್ತಿದ್ದೇನೆ. ಎಂಡಾರ್ಸ್‌ಮೆಂಟ್‌ಗೆ ಅರ್ಜಿ ಹಾಕಬೇಕು, ರಿಜಿಸ್ಟರ್‌ನಲ್ಲಿ ಎಂಟ್ರಿ ಮಾಡುವಾಗ ಯಾರೋ ಗುಮಾಸ್ತ ಮಾಡತಕ್ಕಂಥ ತಪ್ಪಿಗೆ ಇಲ್ಲ ನಾವು ಕನ್ಸಿಡರ್ ಮಾಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಇದು ಮುಖ್ಯವಾದಂಥ ಸಮಸ್ಯೆಯಾಗಿದೆ. ಅದಕ್ಕೂ ಕೂಡ ಸರ್ಕಾರದವರು ಏನಾದರೂ ಮಾಡಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಎಂಡಾರ್ಸ್‌ಮೆಂಟ್ ಇದ್ದರೂ ಕೂಡಚೌಕಾಶಿ ಮಾಡುವುದಕ್ಕೆ ಬರುವುದಿಲ್ಲ ಎಂದು ಡಿ.ಸಿ.ಯವರು ಹೇಳುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ನಾನು ಅದಕ್ಕೆ ಸೂಚನೆ ಕೊಡುತ್ತೇನೆ. ಆದರೆ ಇನ್ನೊಂದು ಫಾರಂ ನಂ. 50ರ ಬಗ್ಗೆ ಚರ್ಚೆ ನಡೆಯುತ್ತಾ ಇದೆ. ಅಧ್ಯಕ್ಷರೆ, ಅದನ್ನು ಜಾಸ್ತಿ ಚರ್ಚೆಮಾಡುವುದು ಬೇಡ, ಈಗ ಏನಾದರು ಮಾಡುತ್ತೇವೆ ಎಂದು ಹೇಳಿಬಿಟ್ಟರೆ ಪೊಜಿಷನ್‌ನಲ್ಲಿರತಕ್ಕ ಬಡವರನ್ನೂ ಹಣ ಇದ್ದವರು, ಅಥವಾ ಶ್ರೀಮಂತರು ಎತ್ತಿ ಹೊರಗೆ ಹಾಕುತ್ತಾರೆ. ಅದಕ್ಕೆ ನಾನು ಮತ್ತು ಕಾನೂನು ಮಂತ್ರಿಗಳು ಒಂದು ಪರ್ಯಾಯ ವ್ಯವಸ್ಥೆಯನ್ನು ಕಂಡು ಹಿಡಿದಿದ್ದೇವೆ. ಬಹಳ ಬೇಗ ಇದನ್ನು ಜಾರಿಯಲ್ಲಿ ತರುತ್ತೇವೆ ಎಂಬುದನ್ನು ಎಲ್ಲಾ ಸದಸ್ಯರ ಗಮನಕ್ಕೂ ತರಬಯಸುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ:– ಮಾನ್ಯ ಅಧ್ಯಕ್ಷರೇ, ಫಾರಂ ನಂ.50ರಲ್ಲಿ ಏನು ಅರ್ಜಿ ಕೊಟ್ಟಿರುತ್ತಾರೆ, ಎಕರೆ ಬಗ್ಗೆಯೂ ಕೂಡ ಇವರು ಫಿಕ್ಸ್ ಮಾಡಿರುತ್ತಾರೆ. 4 ಎಕರೆ 38 ಗುಂಟೆ ಅದರೊಳಗೆ ಇರಬೇಕು, ಹಾಗಿದ್ದರೆ ಮಾತ್ರ ಮಂಜೂರು ಮಾಡಬೇಕು ಎಂದು. ಇಂತಹ ಬೆಳೆಯನ್ನೇ ಬೆಳೆದಿರಬೇಕು ಎಂಬ ಒಂದು ಕಂಡೀಷನ್ ಕೂಡ ಇದೆ. ನಮ್ಮ ಮಲೆನಾಡಿನಲ್ಲಿ ಅದರಲ್ಲೂ ಚಿಕ್ಕಮಗಳೂರು, ಶಿವಮೊಗ್ಗ, ಕೊಡಗು ಈ ಜಿಲ್ಲೆಯಲ್ಲಿ ಬಹುತೇಕ ಬಡವರು, ಈ ಜಿಲ್ಲೆಗಳಲ್ಲಿ ಬಹುತೇಕ ಒಂದು ಎಕರೆ, 10 ಗುಂಟೆ, 20 ಗುಂಟೆ ಇರುವ ಕಡೆ ಕಾಫೀ ಬೆಳೆಯನ್ನು ಹಾಕಿದರೆ ಅದನ್ನು ಮಂಜೂರು ಮಾಡುವುದಿಲ್ಲ. ಅದನ್ನು ಮಂಜೂರು ಮಾಡುವುದಕ್ಕೆ ಪ್ರಾವಿಜನ್ ಇಲ್ಲ. ನೀವು ಇಷ್ಟು ಎಕರೆ ಎಂದು ಲಿಮಿಟ್ ಮಾಡಿದ್ದೀರಿ. 4-5ಎಕರೆಯೊಳಗೆ ಏನು ಲಿಮಿಟೇಷನ್ ಇದೆ, ಅವರು ಏನೇ ಬೆಳೆಯನ್ನು ಬೆಳೆದಿರಲಿ ಅದನ್ನು ಕೊಡುವುದಕ್ಕೆ ಏನಾದರೂ ವ್ಯವಸ್ಥೆಯನ್ನು ಮಾಡಿದರೆ ತುಂಬಾ ಬಡಜನರಿಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಇದರಿಂದ ಏನ್ನೂ ಪ್ರಯೋಜನವಾಗುವುದಿಲ್ಲ. ನಾನು ಈಗ ಒಬ್ಬ ಅಧ್ಯಕ್ಷನಾಗಿ ಕೆಲಸ ಮಾಡುತ್ತಿದ್ದೇನೆ. ಒಂದು ನೂರು ಅರ್ಜಿಗಳು ಬಂದರೆ ಅದರಲ್ಲಿ ಹತ್ತು ಅರ್ಜಿಗಳು ಮಂಜೂರಾಗುತ್ತದೆ; ತೊಂಭತ್ತು ಅರ್ಜಿಗಳು ವಜಾ ಆಗುತ್ತದೆ. ಅದರಲ್ಲೂ ನಮ್ಮ ಏರಿಯಾದಲ್ಲಿ ತಾವು ಸಹಾಯ ಮಾಡಿದರೆ ಬಡವರಿಗೆ ಅನುಕೂಲವಾಗುತ್ತದೆ.

ಶ್ರೀ ಆರ್. ನಾರಾಯಣ್:- ಮಾನ್ಯ ಅಧ್ಯಕ್ಷರೆ, ಮೊನ್ನೆ ನನ್ನ ಪ್ರಶ್ನೆ ಲ್ಯಾಪ್ಸಾಗಿದೆ. ಅವರು ಉತ್ತರದಲ್ಲಿ ಕಾಲಾವಕಾಶವನ್ನು ವಿಸ್ತರಣೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಈಗ ಸರಿ ಸುಮಾರು ಶೇ. 20ರಿಂದ 30ರವರೆಗೆ ಜೆನಿಯನ್ ಬೋನಾಫಾಯ್ಡ್, ಅನ್-ಅಥವ ರೈಜ್ಡ್ ಇರುವವರು ಸಕಾಲದಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದಾರೆ.

ಅಧ್ಯಕ್ಷರು:- ಮಾನ್ಯ ನಾರಾಯಣ್‌ರವರೆ, ಪ್ರತಿಯೊಬ್ಬರು ಪ್ರೊಸೀಡಿಂಗ್ಸ್ ಅನ್ನು ಬಹಳ ಲಕ್ಷ್ಯಕೊಟ್ಟು ಕೇಳಿಕೊಳ್ಳಬೇಕು. ಮಾನ್ಯ ಮಂತ್ರಿಗಳು ಏನು ಹೇಳಿದರು ಎಂದರೆ ಸಾರಸಗಟಾಗಿ ವಿಸ್ತರಣೆ ಮಾಡುತ್ತೇವೆಂದು ಡಿಕ್ಲೇರ್ ಮಾಡಿದರೆ ನಿಜವಾದ ಬೆನಿಫಿಶೀಯರ್ಸ್‌ಗೆ ತೊಂದರೆಯಾಗುತ್ತದೆ. ಬೋಗಸ್ ಅಪ್ಲಿಕೇಷನ್‌ಗಳು ಇರುವವರು ಬಂದು ರಿಜಿಸ್ಟ್ರೇಷನ್ ಮಾಡಿರುತ್ತಾರೆಂದು ಅವರು ಹೇಳುತ್ತಾರೆ. ತಾವು ಅತುರ ಮಾಡಬೇಡಿ, ಅವರು ಏನು ಹೇಳುತ್ತಾರೆಂಬುದನ್ನು ಕೇಳಿ.

ಶ್ರೀ ಆರ್. ನಾರಾಯಣ್:- ನನಗೆ ಅರ್ಥವಾಯಿತು, ಅವರು ಪರಿಹಾರವನ್ನು ಕಂಡುಹಿಡಿದ್ದಾರೆ. ನಾನು ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಬಗರ್‌ಹುಕುಂ ಎಂದು ಹೇಳಿದರೆ ಗೋಮಾಳ, ಖರಾಬ್ ಲ್ಯಾಂಡ್‌ಗಳನ್ನು ಅಸಲಥಾರೈಜ್ಡ್ ಇರುವುದನ್ನು ರೆಗ್ಯೂಲರೈಜ್ ಮಾಡುತ್ತಿದ್ದೀರಿ. ಈಗ ಸಾಕಷ್ಟು ಲ್ಯಾಂಡ್ ಫಾರೆಸ್ಟದು ಅಮೃತ್ ಮಹಲ್, ಎಕ್ಸೈಜ್ ಲ್ಯಾಂಡ್ ಬಗ್ಗೆ ಸರ್ಕಾರ ಏನಾದರೂ ಉತ್ತರವನ್ನು ಹೇಳಬೇಕಲ್ಲಾ,

ಅಧ್ಯಕ್ಷರು:- ಅಲ್ಲಿ ಒಂದು ಇಂಚು ಜಾಗವನ್ನೂ ಕೂಡ ಕೊಡುವುದಕ್ಕಾಗುವುದಿಲ್ಲ. ಈಗ ಇರುವ ಅರಣ್ಯ ಹೋಗಿದೆ. ಇನ್ನು ಇರುವ ಅರಣ್ಯವನ್ನು ಕೊಟ್ಟು ಏನು ಮಾಡುತ್ತೀರಿ?

ಶ್ರೀ ಆರ್.ನಾರಾಯಣ್:- ಬೇರೆ ಗೋಮಾಳ, ಕರಾಬ್‌ಲ್ಯಾಂಡ್ ಇವೆಲ್ಲವನ್ನು ರೆಗ್ಯೂಲರೈಜ್ ಮಾಡುತ್ತಿದ್ದಾರೆ. what about unauthorised cultivation in forest, amruthmahal, etc.? ಇದರ ಬಗ್ಗೆ ಸರ್ಕಾರದ ನಿಲುವು ಏನು?

ಅಧ್ಯಕ್ಷರು:- ಇದನ್ನು ಬಿಡಿ. we will take it up separately.

(ಓ) ದರಖಾಸ್ತು ಕಮಿಟಿ ಕುರಿತು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ಈಗ ದರಖಾಸ್ತು ಸಮಿತಿಗೆ ಜಮೀನುಗಳನ್ನು ಮಂಜೂರು ಮಾಡತಕ್ಕಂಥಾದ್ದು ಇದನ್ನು ಕಟ್ ಆಫ್ ಡೇಟಿನಲ್ಲಿ ಮುಕ್ತಾಯ ಮಾಡುವಂತಹ ಒಂದು ಡೇಟ್ ಫಿಕ್ಸ್ ಮಾಡಿ ನಂತರ ಫಾರಂ 50ರ ಬಗ್ಗೆ ಯೋಚನೆ ಮಾಡಬಹುದು. ಅದು 3-4ವರ್ಷ ಆದರೂ ಪ್ರೊಲಾಂಗ್ ಆಗುತ್ತಾ ಹೋದರೆ ಪ್ರಯೋಜನವಾಗುವುದಿಲ್ಲ. ಎಲ್ಲರೂ ನಿವೃತ್ತಿಯಾಗಿರುವಂತಹ ತಹಶೀಲ್ದಾರರು ಆಗಿದ್ದಾರೆ. ಫಿಲ್ಡ್ ವರ್ಕರ್ಸ್ ಯಾರೂ ಇಲ್ಲ.

ಅಧ್ಯಕ್ಷರು:- ನಾನು ನನ್ನ ಕ್ಷೇತ್ರದಲ್ಲಿ ಅನುಭವಿಸುತ್ತಿರುವಂತಹ ತೊಂದರೆಯನ್ನು ಹೇಳುತ್ತೇನೆ. ನಾನು ಜಿಲ್ಲಾಧಿಕಾರಿಯನ್ನು ಕರೆಸಿ ಕೂರಿಸಿಕೊಂಡು ಹೇಳಿದೆ. ನಿಮ್ಮ ಅಧಿಕಾರಿಗಳು